# ಶ್ರೇಷ್ಠ ವ್ಯಕ್ತಿತ್ವ ರಾಷ್ಟ್ರದ ಮಹತ್ವ

ಸ್ವಾಮಿ ಪುರುಷೋತ್ತಮಾನಂದ

ಮನುಜರೆಲ್ಲರೂ ಒಂದೇ ಕುಲ—ಮನುಜಕುಲ ಎಂಬುದು ನಿಜ. ಆದರೆ ಎಲ್ಲ ಮನುಜರ ವ್ಯಕ್ತಿತ್ವ ಒಂದೇ ಅಲ್ಲ. ಹೆಚ್ಚಿನವರ ವಿಷಯದಲ್ಲಿ ಅವರಿಗೊಂದು ವ್ಯಕ್ತಿತ್ವವಿದೆಯೆಂದು ಹೇಳುವಂತೆಯೇ ಇಲ್ಲ! ಹಾಗಾದರೆ ವ್ಯಕ್ತಿತ್ವವೆಂದರೇನು? ಇದಕ್ಕೆ ಉತ್ತರವನ್ನು ಒಂದು ಮಾತಿನಲ್ಲಿ ಹೇಳಿಬಿಡುವಂತಿಲ್ಲ. ಏಕೆಂದರೆ, ವ್ಯಕ್ತಿತ್ವವೆಂದರೆ ಸದ್ಗುಣಗಳಿಂದ ಕೂಡಿದ ಸಜ್ಜನಿಕೆಯೆಂದುಬಿಡಲೆ? ಕೂಡದು. ಏಕೆಂದರೆ ಮರ್ಯಾದಾಪುರುಷೋತ್ತಮನೆಂದೇ ಕರೆಸಿಕೊಂಡ ಶ್ರೀರಾಮನಂತೆ ರಾವಣನಿಗೂ ಒಂದು ವ್ಯಕ್ತಿತ್ವವಿತ್ತಲ್ಲವೆ? ಅದೂ ಎಂತಹ ವ್ಯಕ್ತಿತ್ವವೆಂದರೆ ಲಂಕಾಧಿಪತಿಯಾದ ರಾವಣೇಶ್ವರನೆಂದು ಕರೆಸಿಕೊಂಡಂಥ ವ್ಯಕ್ತಿತ್ವ! ಅಲ್ಲದೆ, ಅಂಥಾ ಸೌಜನ್ಯಮೂರ್ತಿಗಳಾದ ರಾಮಲಕ್ಷ್ಮಣರೇ ಅವನೊಡನೆ ಸೆಣಸಾಡಲು ಬರಬೇಕಾದಂತಹ ವ್ಯಕ್ತಿತ್ವ! ಹಾಗೆಯೇ ಹಿರಣ್ಯಾಕ್ಷ-ಹಿರಣ್ಯಕಶಿಪು, ಹಾಗೆಯೇ ಕಂಸ-ಕೌರವಾದಿಗಳು—ಇವರಿಗೂ ವ್ಯಕ್ತಿತ್ವವೆಂಬುದು ಇತ್ತಲ್ಲವೆ? ಆದ್ದರಿಂದಲೇ ಅವರೆಲ್ಲ ಯುಗಯುಗಾಂತರಗಳಿಂದ ಜನಕೋಟಿಯ ಮನಃಪಟಲದಲ್ಲಿ ನೆಲೆನಿಲ್ಲುವಂತಾಯಿತಲ್ಲವೆ? ಅವರ ಹೆಸರು ಹೇಳುತ್ತಿದ್ದವರೇ ಹೇಳಹೆಸರಿಲ್ಲದಂತಾದರೂ ಅವರ ಹೆಸರು ಮಾತ್ರ ಇಂದಿಗೂ ಹಸನಾಗಿ ಉಳಿದುಕೊಂಡಿದೆಯಲ್ಲವೆ? ಹೀಗಿರುವಾಗ ಈ ವ್ಯಕ್ತಿತ್ವ ಎಂಬ ಶಬ್ದಕ್ಕೆ ಏನು ಅರ್ಥ ಎಂಬ ಪ್ರಶ್ನೆ ಎದ್ದೇ ಏಳುತ್ತದೆ. ಆಗ, ಸಾಮರ್ಥ್ಯ-ಚಾತುರ್ಯ-ಪ್ರತ್ಯುತ್ಪನ್ನಮತಿ-ಪ್ರತಿಭೆ—ಇವೇ ಮೊದಲಾದ ಶಕ್ತಿಗಳು ಯಾರಲ್ಲಿ ವ್ಯಕ್ತವಾಗಿವೆಯೋ ಅದೇ ವ್ಯಕ್ತಿತ್ವ ಎಂದು ಹೇಳಬೇಕಾಗುತ್ತದೆ. ಆದರೆ ಹೀಗೆ ಹೇಳುವಾಗಲೂ ಸ್ವಲ್ಪ ವಿವೇಚಿಸಿ ನೋಡುವ ಕೆಲಸವೊಂದಿದೆ, ಏನೆಂದರೆ ಈ ಸಾಮರ್ಥ್ಯ-ಚಾತುರ್ಯ-ಪ್ರತಿಭೆಗಳೆಂಬವು ಕತ್ತಿ-ಗುರಾಣಿಗಳಂತೆ, ಶಸ್ತ್ರಾಸ್ತ್ರಗಳಂತೆ. ಶಸ್ತ್ರಾಸ್ತ್ರಗಳನ್ನು ಶ್ರೀರಾಮನೂ ಹಿಡಿದುಕೊಳ್ಳಬಹುದು, ರಾವಣನೂ ಹಿಡಿದುಕೊಳ್ಳಬಹುದು. ಆದರೆ ಆ ಶಸ್ತ್ರಾಸ್ತ್ರಗಳು ರಾವಣನ ಕೈಯಲ್ಲಿದ್ದರೆ ಅವನು ಲೋಕಕಂಟಕನಾಗುತಾನೆ; ಶ್ರೀರಾಮನ ಕೈಯಲ್ಲಿದ್ದರೆ ಅವನು ಲೋಕರಕ್ಷಕನಾಗುತ್ತಾನೆ. ಹಾಗೆಯೇ, ದುರ್ಜನರಲ್ಲಿ ಸಾಮರ್ಥ್ಯ -ಚಾತುರ್ಯ-ಪ್ರತಿಭೆಗಳೇ ಮೊದಲಾದ ಶಕ್ತಿಗಳಿದ್ದು ಬಿಟ್ಟರೆ ಅವರಿಂದ ನಿರಂತರ ಅಪಾಯ ಕಟ್ಟಿಟ್ಟದ್ದು; ಅದೇ ಶಕ್ತಿಗಳು ಸಜ್ಜನರಲ್ಲಿದ್ದರೆ ಮಂಗಳಮಯ ವಾತಾವರಣ ನಿರ್ಮಾಣಗೊಳ್ಳುವುದು ನಿಶ್ಚಯ. ಆದ್ದರಿಂದ ವ್ಯಕ್ತಿವ್ಯಕ್ತಿಗಳಲ್ಲಿ ಈ ಸಾಮರ್ಥ್ಯ-ಚಾತುರ್ಯ-ಪ್ರತಿಭೆಗಳೇ ಮೊದಲಾದ ಶಕ್ತಿಗಳು ವಿಕಾಸ ಹೊಂದುವ ಕಾಲದಲ್ಲಿಯೇ ಅವರಲ್ಲಿ ಸೌಜನ್ಯ, ಔದಾರ್ಯ, ಕರುಣೆ, ಸಹನೆ, ಸಂಯಮಗಳೇ ಮೊದಲಾದ ಸದ್ಗುಣಗಳೂ ವಿಕಾಸವಾಗುವಂತಿರಬೇಕು. ಆಗ ಮಾತ್ರವೇ ಅಂಥವರ ವ್ಯಕ್ತಿತ್ವಗಳಿಂದ ಸಮಾಜಕ್ಕೆ, ರಾಷ್ಟ್ರಕ್ಕೆ ಮಹದುಪಕಾರವಾಗುತ್ತದೆ, ಮಹಿಮೆ ಬರುತ್ತದೆ.

ಪ್ರಬುದ್ಧ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯಲ್ಲೂ ರಾಷ್ಟ್ರಪ್ರಜ್ಞೆ ಜಾಗ್ರತವಾಗಿರಬೇಕಾದುದು ಅತ್ಯಾವಶ್ಯಕ. ಆದರೆ, ರಾಷ್ಟ್ರಪ್ರಜ್ಞೆಗಿಂತಲೂ ಮೊದಲು ಅತ್ಯವಶ್ಯವಾಗಿ ವ್ಯಕ್ತಿತ್ವದ ಪ್ರಜ್ಞೆ, ಚಾರಿತ್ರ್ಯ ಪ್ರಜ್ಞೆ, ಅರಳಿರಬೇಕಾದುದು ಇನ್ನೂ ಮಹತ್ವದ್ದು. ಏಕೆಂದರೆ, ರಾಷ್ಟ್ರವೆಂದರೆ ಕೇವಲ ಅದೊಂದು ಭೌಗೋಳಿಕ ಪರಿಸರವಲ್ಲವಲ್ಲ! ರಾಷ್ಟ್ರವೆಂದರೆ ಕೇವಲ ಜನಸಂದಣಿಯಿಂದ ಕೂಡಿದ ಬೀಡೂ ಅಲ್ಲ. ಉನ್ನತ-ಉದಾತ್ತ ವ್ಯಕ್ತಿತ್ವವಿಲ್ಲದ ಪ್ರಜೆಗಳು ಲೆಕ್ಕವಿಲ್ಲದಷ್ಟಿದ್ದರೂ ಅದಾವ ಲೆಕ್ಕ? ಶ್ರೇಷ್ಠ ರಾಷ್ಟ್ರವೆಂದಮೇಲೆ ಶಿಸ್ತು-ಸಭ್ಯತೆ-ದಕ್ಷತೆಗಳಿಂದಲೂ ಮಾನವೀಯ ಮೌಲ್ಯಗಳಿಂದಲೂ ಶೋಭಾಯಮಾನವಾದ ಸರಕಾರವೊಂದಿರಬೇಡವೇ? ಶ್ರೇಷ್ಠರಾಷ್ಟ್ರವೆಂದಮೇಲೆ ರಾಷ್ಟ್ರದಾದ್ಯಂತವೂ ಭದ್ರವಾದ ಹಾಗೂ ನಿಯಮ-ನಿಷ್ಠೆ-ನಿಯತ್ತುಗಳಿಂದ ಕೂಡಿದ ಆಡಳಿತ ಮಂಡಲವೊಂದಿರಬೇಡವೆ? ಶ್ರೇಷ್ಠ ರಾಷ್ಟ್ರವೆಂದಮೇಲೆ ರಾಷ್ಟ್ರದ ಭಾವೀಜನಾಂಗವಾದ ಯುವ ವಿದ್ಯಾರ್ಥಿ-ವಿದ್ಯಾರ್ಥಿನಿಯರ ವ್ಯಕ್ತಿತ್ವಗಳನ್ನು ರೂಪಿಸಬಲ್ಲ ಶಾಲಾ-ಕಾಲೇಜು-ವಿಶ್ವವಿದ್ಯಾನಿಲಯಗಳಿರಬೇಡವೆ? ಹೌದು, ಇರಬೇಕು, ನಿಜ. ಆದರೆ, ಅವುಗಳನ್ನೆಲ್ಲ ರೂಪಿಸಲು ಲಕ್ಷಗಟ್ಟಲೆ ದಕ್ಷ ಪ್ರಜೆಗಳು ಬೇಡವೆ? ಬೇಕು, ನಿಜ. ಆದರೆ ಶ್ರೇಷ್ಠ ವ್ಯಕ್ತಿತ್ವವುಳ್ಳ ಆ ಪ್ರಮಾಣದ ಜನ ದೇಶದಲ್ಲಿ ಇರುವರೆ? ಇಲ್ಲವೆಂದಾದರೆ, ಯುಕ್ತ ಶಿಕ್ಷಣ, ಸೂಕ್ತ ತರಬೇತಿ ಕೊಟ್ಟು ಅಂಥವರನ್ನು ಮೊದಲು ನಿರ್ಮಾಣ ಮಾಡಿಕೊಳ್ಳಬೇಡವೆ? ಈ ದಿಸೆಯಲ್ಲಿ ರಾಷ್ಟ್ರದ ಸಮಸ್ತ ಹಿರಿಯ ಪ್ರಜ್ಞಾವಂತರು ಸಮಾಲೋಚಿಸಿ, ಸುಸಂಘಟಿತರಾಗಿ, ಶಕ್ತಿಮೀರಿ ಶ್ರಮಿಸುವಲ್ಲಿ ಮುಂದಾಗದಿದ್ದರೆ, ಬಹುಶಃ ಸರ್ವಶಕ್ತನಾದ ಪರಮಾತ್ಮನೇ ಸಾರಥಿತ್ವವನ್ನು ವಹಿಸಿಕೊಳ್ಳಬೇಕಾಗುತ್ತದೆ! ಅಥವಾ, ಈ ಅಸಂಖ್ಯಾತ ಚಿತ್ರವಿಚಿತ್ರ ವ್ಯಕ್ತಿಗಳ ನಡುವೆ ಇದ್ದುಕೊಂಡು ನಂನಮ್ಮ ಚಾರಿತ್ರ್ಯ ಪೂರ್ಣ ವ್ಯಕ್ತಿತ್ವವನ್ನು ನಾವು ನಾವೇ ರೂಪಿಸಿ ಕೊಳ್ಳಬೇಕೆಂಬುದು ಅವನ ಇಚ್ಛೆಯಿರಬಹುದೇನೋ, ಯಾರು ಬಲ್ಲರು?

❄